ಬಹಳ ಹಿಂದೆ, ಒಂದು ಊರಿನಲ್ಲಿ, ಅನಾಥರಾಗಿದ್ದ ಅಣ್ಣ ತಮ್ಮ ಇದ್ದರು. ಅಣ್ಣ ಹರಿ ಸ್ವಲ್ಪ ಕಡಿಮೆ ಬುದ್ಧಿಯವ. ಆದರೆ ತಮ್ಮ ನಾರಾಯಣ ಚಾಲಾಕಿ. ಇಬ್ಬರೂ, ಇದ್ದ ಊರಿನಲ್ಲೇ ಸಿಕ್ಕ ಕೂಲಿನಾಲಿ ಮಾಡಿ ಜೀವನ ಸಾಗಿಸುತ್ತಿದ್ದರು. ಆದರೆ ಅದು ಊಟ ಬಟ್ಟೆಗೆ ಸಾಲುತ್ತಿರಲಿಲ್ಲ. ಆಗಿನ ಕಾಲದಲ್ಲಿ ಹೆಚ್ಚಿಗೆ ಕೂಲಿ ಕೆಲಸವೂ ಸಿಗುತ್ತಿರಲಿಲ್ಲ. ಅದಕ್ಕೆ ತಮ್ಮ, ಹರಿಗೆ 'ಅಣ್ಣ ಒಂದೇ ಊರಿನಲ್ಲಿ ನಾವಿಬ್ಬರೂ ಇದ್ದರೆ ಕೆಲಸ ಸಿಗುವುದಿಲ್ಲ. ಇಬ್ಬರಲ್ಲಿ ಒಬ್ಬರು ಬೇರೆ ಊರಿಗೆ ಹೋಗಿ ಕೆಲಸ ನೋಡೋಣ' ಎಂದ. ಅದಕ್ಕೆ ಹರಿ 'ಆಯಿತು ನಾರಾಯಣ. ನಾನು ಪಕ್ಕದ ಊರಿಗೆ ಹೋಗಿ ಕೆಲಸ ನೋಡುತ್ತೇನೆ. ನೀನು ಇಲ್ಲೇ ಇರು' ಎಂದ. ತಮ್ಮ 'ಆಯಿತು. ಆದರೆ ಒಂದು ತಿಂಗಳ ನಂತರ ನಾವಿಬ್ಬರು ಮತ್ತೆ ಭೇಟಿಯಾಗಿ ನಮ್ಮ ಕೆಲಸದ ಬಗ್ಗೆ ಹೇಳಿಕೊಳ್ಳೋಣ' ಎಂದ.

ಹರಿ ಪಕ್ಕದ ಊರಿಗೆ ಬಂದು, ಅಲ್ಲಿನ ಅಯ್ನೋರ ಮನೆಯಲ್ಲಿ ಕೆಲಸ ಕೇಳಿದ. ಅದಕ್ಕೆ ಅವರು 'ಒಂದು ದಿನಕ್ಕೆ, ನಮ್ಮ ಕುದುರೆಗೆ ಒಂದು ಏಳುಕಟ್ಟಿನ ಹೊರೆ ಹುಲ್ಲು, ಅಡುಗೆ ಮನೆಗೆ ಏಳುಕಟ್ಟಿನ ಹೊರೆ ಸೌದೆ, ಬಚ್ಚಲುಮನೆಗೆ ಒಂದು ಹಂಡೆ ನೀರು ತುಂಬಬೇಕು. ದಿನಕ್ಕೆ ಒಂದು ಕಾಸು, ಸೀಗೆ ಎಲೆಯಲ್ಲಿ ಒಂದು ಊಟ. ಆಗಬಹುದೆ?' ಎಂದರು. ಊಟ, ಕಾಸು ಎರಡೂ ಸಿಗುವುದು ಎಂದಾಗ ಹರಿ ಮರುಮಾತನಾಡದೆ ಒಪ್ಪಿಕೊಂಡ. ಅದಕ್ಕೆ ಅಯ್ನೋರು 'ಆದರೆ ಒಂದು ಷರತ್ತು. ನಾವು ಮೊದಲು ನಿನ್ನನ್ನು ಕೆಲಸ ಬಿಡಿಸಿದರೆ ನಾವು ನಮ್ಮ ಮೀಸೆ, ತಲೆಕೂದಲು ಬೋಳಿಸಿಕೊಳ್ಳುತ್ತೇವೆ. ನೀನಾಗೇ ಬಿಟ್ಟು ಹೋದರೆ ನಿನ್ನ ಮೀಸೆ, ತಲೆಕೂದಲು ಬೋಳಿಸಿಕೊಳ್ಳಬೇಕು. ಆಗಬಹುದೆ?' ಎಂದರು. 'ಅದಕ್ಕೇನು? ಆಗಲಿ' ಎಂದ ಹರಿ.

ಮೊದಲು ಕಾಡಿಗೆ ಹೋಗಿ ಸೌದೆ ಸೇರಿಸಿ ಏಳುಕಟ್ಟು ಹಾಕಿ ಕಟ್ಟಿದ. ಅದನ್ನು ಹೊತ್ತು ತರುವಷ್ಟರಲ್ಲಿ ಅವನಿಗೆ ಸಾಕು ಸಾಕಾಯಿತು. ಅಂತೆಯೇ ಏಳುಕಟ್ಟಿನ ಹುಲ್ಲಿನ ಹೊರೆ ಸಿದ್ಧಪಡಿಸಿದ. ಅದನ್ನು ಎತ್ತಿ ಹೊತ್ತುಕೊಳ್ಳಲು ಬೇರೊಬ್ಬರು ಸಹಾಯ ಮಾಡಬೇಕಾಯಿತು. ಮನೆಗೆ ಬಂದು, ಹಂಡೆಗೆ ಬಾವಿಯಿಂದ ನೀರು ಸೇದಿ ತುಂಬಿಸಲು ಆರಂಭಿಸಿದ. ಎಷ್ಟು ತುಂಬಿಸಿದರೂ ಹಂಡೆ ತುಂಬುತ್ತಿರಲೇ ಇಲ್ಲ. ಆ ಹಂಡೆಗೆ ಒಂದು ಕೊಳಾಯಿ ಜೋಡಿಸಿದ್ದು, ಅದರ ಮೂಲಕ ಹಿತ್ತಲಿನ ಹೂಗಿಡಗಳಿಗೆ ಮನೆಯ ಯಜಮಾನತಿ ನೀರು ಹಾಯಿಸುತ್ತಿದ್ದಳು. ಅದನ್ನು ಗಮನಿಸದ ದಡ್ಡ ಹರಿ, ನೀರು ಸೇದಿ ಸೇದಿ ಸೋತು ಹೋದ. ಕೊನೆಯಲ್ಲಿ ಊಟವನ್ನಾದರೂ ಚೆನ್ನಾಗಿ ಮಾಡಬಹುದಲ್ಲ ಎಂದುಕೊಂಡು, ಕುಳಿತರೆ, ಸೀಗೆ ಎಲೆಯಲ್ಲಿ ಊಟ ಬಡಿಸಿದರು. ಬೆರಳಗಲ ಇರದ ಸೀಗೆ ಎಲೆಯ ಊಟ ಹರಿಯ ಒಂದು ಹಲ್ಲಿಗೂ ಸಾಲಲಿಲ್ಲ. 'ಇನ್ನೂ ಸ್ವಲ್ಪ ಊಟ ಕೊಡಿ' ಎಂದರೆ, 'ನೀನು ಹಂಡೆಗೆ ನೀರೇ ತುಂಬಿಸಿಲ್ಲ. ಹೆಚ್ಚಿಗೆ ಊಟ ಬೇರೆ ಕೇಳುತ್ತೀಯಲ್ಲ' ಎಂದು ದಬಾಯಿಸಿದರು. ಹರಿಗೆ ತುಂಬಾ ಕಷ್ಟವಾಯಿತು. 'ಕೆಲಸ ಬಿಡುತ್ತೇನೆಂದರೆ ಮೀಸೆ ತಲೆ ಬೋಳಿಸಿಕೊಳ್ಳಬೇಕು. ಒಂದು ತಿಂಗಳು ಹೇಗಾದರೂ ತಳ್ಳಬೇಕು. ಆಗ ತಮ್ಮನ ಬಳಿ ನನ್ನ ಸಮಸ್ಯೆ ಹೇಳಿಕೊಳ್ಳಬಹುದು' ಎಂದುಕೊಂಡ ಹರಿ, ಕೈಗೆ ಬಿದ್ದ ಒಂದು ಕಾಸಿನಿಂದ ಅಂಗಡಿಯಲ್ಲಿ ಏನಾದರು ಕೊಂಡು ತಿಂದು ಹಸಿವು ನೀಗಿಸಿಕೊಳ್ಳತೊಡಗಿದ.

ಒಂದು ತಿಂಗಳಾಯಿತು. ಹರಿ ನಾರಾಯಣನಲ್ಲಿಗೆ ಓಡಿದ. ತಮ್ಮನಲ್ಲಿ ತನ್ನ ಕಷ್ಟವನ್ನೆಲ್ಲಾ ಹೇಳಿಕೊಂಡ. ಆಗ ನಾರಾಯಣ 'ಅಣ್ಣ, ನೀನು ಇಲ್ಲಿಯೇ ಇರು. ನಿನ್ನ ಕೆಲಸಕ್ಕೆ ನಾನು ಹೋಗುತ್ತೇನೆ' ಎಂದ. ಇಬ್ಬರೂ ಪಕ್ಕದ ಊರಿಗೆ ಹೋಗಿ, ಅಯ್ನೋರ ಮನೆಯಲ್ಲಿ ಅಣ್ಣನ ಬದಲಿಗೆ ತಮ್ಮ ಕೆಲಸಕ್ಕೆ ಬರುವ ವಿಷಯ ತಿಳಿಸಿದರು. ಅಣ್ಣನಿಗಿಂತ ತಮ್ಮನೇ ಹೆಚ್ಚು ಬಲಶಾಲಿಯಾಗಿ ಕಂಡಿದ್ದರಿಂದ ಅವರೂ ಒಪ್ಪಿದರು. ಆದರೆ ನಾರಾಯಣ ಷರತ್ತಿನಲ್ಲಿ ಒಂದು ತಿದ್ದುಪಡಿ ಸೇರಿಸಿದ. 'ಸ್ವಾಮಿ ನೀವು ಹೇಳಿರುವ ಮೂರು ಕೆಲಸಗಳನ್ನು ನಾನು ಮಾಡುತ್ತೇನೆ.